


## ಹೂಕ್ಡ್

ಸಣ್ಣ ಕತೆ, ಕಾದಂಬರಿ ಓದನ್ನು ಜನಪ್ರಿಯಗೊಳಿಸಲು ಅಮೆರಿಕಾದ ಭಾರತೀಯ ಉದ್ಯಮಿ 'ಟೆಲಿಪಥಿಕ್'ನ ಸ್ಥಾಪಕಿ ಪ್ರೇರಣಾ ಗುಪ್ತಾ ಈ ಆ್ಯಪ್ ಬಿಡುಗಡೆ ಮಾಡಿದ್ದಾರೆ. ಒಂದು ಸಾವಿರ ಶಬ್ದದೊಳಗಿರುವ ಈ ಕತೆಗಳನ್ನು ಐದು ನಿಮಿಷದೊಳಗೆ ಓದಬಹುದು. ಈ ಕತೆಗಳು ಸಂಭಾಷಣೆ ಮಾದರಿಯಲ್ಲಿದ್ದು, 'ನೆಕ್ಸ್ಟ್' ಮೇಲೆ ಕ್ಲಿಕ್ ಮಾಡಿದಾಗ ಸಂದೇಶ ಕಾಣಿಸುತ್ತದೆ. ಬಳಕೆದಾರರು ಕೂಡಾ ತಮ್ಮ ಕತೆ ಸೇರಿಸಬಹುದು. ಆ್ಯಪ್ ಅನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಂಡು ನಿತ್ಯ ಒಂದು ಕತೆ ಮಾತ್ರ ಓದಬಹುದು. ಒಂದಕ್ಕಿಂತ ಹೆಚ್ಚು ಕತೆ ಓದಬೇಕಾದರೆ ಶುಲ್ಕ ನೀಡಬೇಕಾಗುತ್ತದೆ. ಗುಪ್ತಾ ಅವರು ಮಾತನ್ನು ಹಾಡನ್ನಾಗಿ ಬದಲಾಯಿಸುವ ಸಾಂಗಿಫೈ ಆ್ಯಪ್ ಸೇರಿದಂತೆ ವಿವಿಧ ಸಂಗೀತದ ಆ್ಯಪ್ ಅಭಿವೃದ್ಧಿಪಡಿಸಿದ ಖುಷ್ ಕಂಪೆನಿಯ ಸ್ಥಾಪಕ ಸಿಇಒ ಕೂಡಾ ಹೌದು.

## ಆ್ಯಪಲ್‌ನ ಐಒಎಸ್ 9

ಐಫೋನ್, ಐಪಾಡ್ ಮತ್ತು ಐಪ್ಯಾಡ್‌ಗೆ ಆ್ಯಪಲ್ ಬಿಡುಗಡೆ ಮಾಡಿರುವ ಈ ಆಪರೇಟಿಂಗ್ ವ್ಯವಸ್ಥೆ ಹಲವು ಸೌಲಭ್ಯಗಳನ್ನು ಹೊಂದಿದ್ದು, ಸಿರಿ ಆ್ಯಪ್ ಅನ್ನು ಸುಧಾರಣೆ ಮಾಡಲಾಗಿದೆ. ವಿವಿಧ ಆ್ಯಪ್‌ಗಳ ಮಧ್ಯೆ ಸಂಪರ್ಕ ಕಲ್ಪಿಸಲಾಗಿದೆ. ಸರ್ಚ್ ಅತ್ಯಂತ ಪ್ರಬಲವಾಗಿದ್ದು, ಬ್ಯಾಟರಿ ಕ್ಷಮತೆ ಹೆಚ್ಚಿಸಲಾಗಿದೆ. ವೈರಸ್‌ನಿಂದ ಭದ್ರತೆ ಕೂಡಾ ಜಾಸ್ತಿ ಮಾಡಲಾಗಿದೆ. ಭಾರತೀಯ ಗ್ರಾಹಕರನ್ನು ಸೆಳೆಯಲು ಕೀಬೋರ್ಡ್ ಅನ್ನು ಹಿಂಗ್ಲಿಷ್, ತೆಲುಗು, ಪಂಜಾಬಿ ಮತ್ತು ಗುಜರಾತಿಯಲ್ಲಿ ನೀಡಲಾಗಿದ್ದು, ಹಿಂದಿಯಿಂದ ಭಾಷಾಂತರ ಸೌಲಭ್ಯ ಕೂಡಾ ಇದೆ. ಈ ವ್ಯವಸ್ಥೆಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ನಿಮ್ಮ ಸಾಧನದಲ್ಲಿ 1.3 ಜಿಬಿ ಜಾಗ ಬೇಕಾಗುತ್ತದೆ.







## ಸಿಗ್ನಲ್

ಫೇಸ್‌ಬುಕ್‌ನ ಈ ಹೊಸ ಟೂಲ್ ಪತ್ರಕರ್ತರಿಗೆ ನೆರವಾಗುವಂಥದ್ದು ಎಂದು ಬಿಂಬಿಸಲಾಗಿದೆ. ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಮಿನಲ್ಲಿರುವ ವಿಷಯಗಳನ್ನು ಹುಡುಕಾಡಿ ಲೇಖನ ತಯಾರಿಸಲು ಇದರಿಂದ ಸಹಾಯ ಪಡೆಯಬಹುದು. ಈ ಟೂಲ್ ಸದ್ಯ ಟ್ರೆಂಡ್‌ನಲ್ಲಿರುವ ವಿಷಯ ಯಾವುದು ಎಂದು ಹುಡುಕಾಡುತ್ತದೆ. ಶೇರ್ ಮಾಡಿದಂತಹವುಗಳನ್ನು ತೋರಿಸುತ್ತದೆ. ಫೇಸ್‌ಬುಕ್‌ನಲ್ಲಿ ಹಾಕಿರುವ ಫೋಟೊ, ವಿಡಿಯೊ, ಪ್ರಸಕ್ತ ವಿಷಯಗಳ ಕುರಿತ ಚರ್ಚೆ ಪತ್ರಕರ್ತರಿಗೆ ವರದಿ ಮಾಡಲು ಅನುಕೂಲವಾಗುತ್ತದೆ. ಸುದ್ದಿ, ಮನರಂಜನೆ, ಕ್ರೀಡೆ, ಸಂಸ್ಕೃತಿ– ಕಲೆ ಮೊದಲಾದವುಗಳ ಮಾಹಿತಿಯನ್ನು ಒಂದೇ ಕಡೆ ಕಲೆ ಹಾಕಬಹುದು.




## ಗೂಗ್ಲ್ ಫ್ಯೂಚರ್

ಗೂಗ್ಲ್ ಸರ್ಚ್ ಎಂಜಿನ್ 'ಪ್ರೆಡಿಕ್ಟ್ ಮೈ ಫ್ಯೂಚರ್' ಎಂಬ ಆ್ಯಪ್ ಹೊರ ತಂದಿದ್ದು, ಬಳಕೆದಾರರು ಬಹು ಕಾಲದಿಂದ ಕಾಡುತ್ತಿರುವ ಪ್ರಶ್ನೆಯನ್ನು ಬರೆದು 'ಪ್ರೆಡಿಕ್ಟ್ ಮೈ ಫ್ಯೂಚರ್' ಎಂಬ ಬಟನ್ ಕ್ಲಿಕ್ ಮಾಡಬಹುದು. ಅದು ಇನ್ನೊಂದು ಪುಟಕ್ಕೆ ಕರೆದೊಯ್ಯುತ್ತದೆ. ಅಲ್ಲಿ ನಿಮ್ಮ ಭವಿಷ್ಯದ ಬದಲು ಜಗತ್ತು ಎದುರಿಸುತ್ತಿರುವ ವಲಸಿಗರ ಸಮಸ್ಯೆಯನ್ನು ಬಿಂಬಿಸುತ್ತದೆ. ಸಿರಿಯ, ಲಿಬಿಯ, ಯೆಮನ್, ಇರಾಕ್, ಅಫ್ಘನಿಸ್ತಾನ ಮೊದಲಾದ ದೇಶಗಳಿಂದ ಯೂರೋಪ್ ರಾಷ್ಟ್ರಗಳಿಗೆ ವಲಸೆ ಹೋಗುತ್ತಿರುವ ಲಕ್ಷಾಂತರ ಮಂದಿಯಿಂದ ಅಲ್ಲಿ ಆಗಿರುವ ಸಮಸ್ಯೆ ಬಗ್ಗೆ ಜಾಗೃತಿ ಮೂಡಿಸುವ ಆ್ಯಪ್ ಇದು. ನೀವು ಸ್ಥಳೀಯ ಸಂಸ್ಥೆಗಳಿಗೆ ಚಂದಾ ನೀಡುವ ಮೂಲಕ ಅವರಿಗೆ ನೆರವು ನೀಡುವ ಅವಕಾಶವೂ ಇದೆ.

■ ಎಸ್. ತುಂಬೆ